




# ರಾಮಕೃಷ್ಣ ಮಹಾಸಂಘದ ಇತ್ತೀಚಿನ ಚಟುವಟಿಕೆಗಳು

**ಸ್ವಾಮಿ ವಿವೇಕಾನಂದರ ಜಯಂತಿ :** ೨೦೨೪ರ ಫೆಬ್ರವರಿ ೨ರಂದು ರಾಮಕೃಷ್ಣ ಮಹಾಸಂಘದ ಎಲ್ಲ ಶಾಖಾಕೇಂದ್ರಗಳಲ್ಲಿ ವಿಶೇಷ ಪೂಜೆ, ಹೋಮ, ಭಜನೆ, ಸಾರ್ವಜನಿಕ ಸಭೆ ಮುಂತಾದ ಕಾರ್ಯಕ್ರಮಗಳೊಂದಿಗೆ ಸ್ವಾಮಿ ವಿವೇಕಾನಂದರ ಜಯಂತಿಯನ್ನು ಆಚರಿಸಲಾಯಿತು.

ಫೆಬ್ರವರಿ ೧ ರಂದು **ಬೇಲೂರು ಮಠದಲ್ಲಿ** ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾದ ಪೂಜ್ಯ ಸ್ವಾಮಿ ಗೌತಮಾನಂದಜಿಯವರು 'ಯೋಗಾನಂದ ರಿಸೆಪ್ಷನ್ ಸೆಂಟರ್' ಅನ್ನು ಉದ್ಘಾಟಿಸಿದರು. ಅದೇ ದಿನ **ಆಲಂಬಜಾರ್ ಮಠದ** ಸ್ಮಾರಕ ಕಟ್ಟಡದ ಶಂಕುಸ್ಥಾಪನೆಯನ್ನೂ ನೆರವೇರಿಸಿದರು.

ಅರುಣಾಚಲ ಪ್ರದೇಶದಲ್ಲಿರುವ ಶಾಖಾಕೇಂದ್ರಗಳು ರಾಜ್ಯದಲ್ಲಿ ಸಲ್ಲಿಸುತ್ತಿರುವ ಸೇವೆಗಾಗಿ ರಾಜ್ಯ ಸರ್ಕಾರವು ರಾಮಕೃಷ್ಣ ಮಿಷನ್ನಿಗೆ **ಅರುಣಾಚಲ ಪ್ರದೇಶ ರಾಜ್ಯಪ್ರಶಸ್ತಿಯನ್ನು** ನೀಡಿದೆ.

**ಹೊಸ ಮಿಷನ್ ಕೇಂದ್ರ :** ಅಸ್ಸಾಂ ರಾಜ್ಯದ **ಖರುಪೇಟಿಯಾ** ಎಂಬಲ್ಲಿ ರಾಮಕೃಷ್ಣ ಮಿಷನ್ನಿನ ಹೊಸ ಶಾಖಾಕೇಂದ್ರ ಆರಂಭಗೊಂಡಿದೆ.

## ಶಾಖಾಕೇಂದ್ರಗಳ ಚಟುವಟಿಕೆಗಳು : ಭಾರತದಲ್ಲಿ

**ರಾಂಚಿ ಮೊರಾಬಾದಿ** ಕೇಂದ್ರವು ಜನವರಿ ಹಾಗೂ ಫೆಬ್ರವರಿ ತಿಂಗಳಲ್ಲಿ ರಾಂಚಿ ಮತ್ತು ರಾಮ್‌ಘರ್ ಜಿಲ್ಲೆಗಳಲ್ಲಿ ನಡೆಸಿದ ಕೃಷಿಕರ ಮೇಳದಲ್ಲಿ ಹಲವು ಮಂದಿ ಗಣ್ಯರು ಹಾಗೂ ೨೯,೦೦೦ ಮಂದಿ ಕೃಷಿಕರು ಭಾಗವಹಿಸಿದ್ದರು. **ನರೋತ್ತಮ ನಗರದಲ್ಲಿ** ಜನವರಿ ೨೯ರಂದು ಹೊಸದಾಗಿ ನಿರ್ಮಿತವಾದ ಕಮಾನನ್ನು ಅರುಣಾಚಲ ರಾಜ್ಯ ಸಚಿವರಾದ ಶ್ರೀ ವಾಂಗ್ಕಿ ಲೊವಾಂಗ್ ಅವರು ಉದ್ಘಾಟಿಸಿದರು. **ನಾರಾಯಣಪುರ** ಕೇಂದ್ರದಲ್ಲಿ ಫೆ.೩ ರಂದು ನಡೆದ ಕೃಷಿಮೇಳದಲ್ಲಿ ೭೦೦೦ ಮಂದಿ ಕೃಷಿಕರು ಭಾಗವಹಿಸಿದ್ದರು. **ಹೈದರಾಬಾದ್** ಕೇಂದ್ರವು ಫೆ.೧೧, ೧೨ ರಂದು ತನ್ನ ಸುವರ್ಣ ಮಹೋತ್ಸವವನ್ನು ವಿಶೇಷ ಪೂಜೆ, ಚಂಡೀ ಹೋಮ, ಸಂಗೀತ ಕಾರ್ಯಕ್ರಮ ಹಾಗೂ ಆಧ್ಯಾತ್ಮಿಕ ಶಿಬಿರದೊಂದಿಗೆ ನಡೆಸಿತು. **ಗರುಪ್** ಕೇಂದ್ರದಲ್ಲಿ ಹೊಸದಾಗಿ ನಿರ್ಮಿತವಾದ ಶ್ರೀರಾಮಕೃಷ್ಣ ಮಂದಿರದ ವಿಸ್ತರಣ ಕಟ್ಟಡವನ್ನು ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾದ ಪೂಜ್ಯ ಸ್ವಾಮಿ ಭಜನಾನಂದಜಿಯವರು ಉದ್ಘಾಟಿಸಿದರು. **ಕೊಯಿಲಾಂಡಿಯಲ್ಲಿ** ಫೆ.೨೪ ರಂದು ಹೊಸ ಕಮಾನು ಮಹಾದ್ವಾರವನ್ನು ಉದ್ಘಾಟಿಸಲಾಯಿತು. ಫೆ.೨೧ರಂದು **ಶಾರದಾ ಪೀಠದ** ವಿದ್ಯಾಮಂದಿರ ಕಾಲೇಜಿನ 'ಬೋಸ್ ಹೌಸ್' ಕ್ಯಾಂಪಸ್ಸನ್ನು ಉದ್ಘಾಟಿಸಲಾಯಿತು. (ಈ ನಿವಾಸವು ಹಿಂದೆ ನೇತಾಜಿಯವರ ತಮ್ಮ ಹಾಗೂ ಸ್ವಾತಂತ್ರ್ಯ ಹೋರಾಟಗಾರ ಶರತ್ ಚಂದ್ರ ಬೋಸ್ ಅವರಿಗೆ ಸೇರಿತ್ತು). **ಜೆಮಶೆಡ್‌ಪುರ** ಕೇಂದ್ರವು ಫೆ.೨೩ರಿಂದ ೨೫ರ ವರೆಗೆ ತನ್ನ ಶತಮಾನೋತ್ಸವವನ್ನು ಆಚರಿಸಿತು. ಇದರಲ್ಲಿ ೨೫೬ ಮಂದಿ ಮಿಷನ್ನಿನ ಸಂನ್ಯಾಸಿಗಳು ಹಾಗೂ ಭಕ್ತರು ಪಾಲ್ಗೊಂಡಿದ್ದರು. **ತಿರುಪತಿ** ಕೇಂದ್ರದಲ್ಲಿ ಫೆ.೨೪ರಂದು ನೂತನವಾಗಿ ನಿರ್ಮಿತವಾದ 'ಶ್ರೀ ಶಾರದಾ ನಿಲಯಂ' ಸಾಧುನಿವಾಸವನ್ನು ಸ್ವಾಮಿ ಗೌತಮಾನಂದಜಿಯವರು ಉದ್ಘಾಟಿಸಿದರು.

**ವಿದೇಶಗಳಲ್ಲಿ :** ಫೆ.೧೮ರಂದು ಬಾಂಗ್ಲಾದೇಶದ **ಬಾಲಿಯಾಟಿ** ಕೇಂದ್ರದಲ್ಲಿ ಹೊಸ ಕಚೇರಿ ಕಟ್ಟಡವನ್ನು ಉದ್ಘಾಟಿಸಲಾಯಿತು.











Managing Editor : Swami Muktidananda
Editor : Swami Jnanayogananda

Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020